ಮತ್ತೆ ದುಡ್ಡು ತುಂಬುವುದೇನೂ ಬೇಕಾಗಿಲ್ಲ. ಈಗ ತುಂಬಿರುವ ದುಡ್ಡಿನ ಮೇಲೆಯೇ ಅದು ನಡೆಯುತ್ತದೆ. ಅದನ್ನು ಮಾಡುತ್ತೇವೆ ಎಂದು ಆ ದಿನ ರೆಸಲ್ಯೂಷನ್ ಕೂಡ ಆಗಿದೆ. ಈ ಬಗ್ಗೆ ಆ ದಿವಸ ಮಿನಿಸ್ಟರ್ ನಡಾವಳಿಗಳನ್ನು ಮಾಡಿದ್ದಾರೆ. ಕೂಡಲೇ ಅದನ್ನು ತರಿಸಿಕೊಂಡು, ನೀವು ಆ ಜಮೀನನ್ನು ತೆಗೆದುಕೊಂಡು ಕೂಡಲೇ ಆ ಬಿಲ್ಡಿಂಗನ್ನು ಪ್ರಾರಂಭ ಮಾಡುವಿರೋ ಹೇಗೆ ಎನ್ನುವುದನ್ನು ಹೇಳಬೇಕು.

ಶ್ರೀ ಇಕ್ಬಾಲ್ ಅನ್ಸಾರಿ : ಹಿರಿಯ ಸದಸ್ಯರಾದಂಥ ಎಸ್. ಎಸ್. ಪಾಟೀಲ್‌ರವರು ಹಿಂದಿನ ಕೈಗಾರಿಕಾ ಸಚಿವರ ಸಭೆಯ ಬಗ್ಗೆ ಹೇಳಿದ್ದು. ಅದು ಇಲಾಖೆಯ ಗಮನಕ್ಕೆ ಇಲ್ಲ ಎಂದು ಹೇಳಿದ್ದಾರೆ. ಹಾಗೆಯೇ, ನಮ್ಮ ಅಧಿಕಾರಿಗಳು ದಣಿಯುತ್ತಿಲ್ಲವೆಂದು ಹೇಳಿದರು. ಅವರನ್ನು ತುಂಬಾ ದಣಿಸುತ್ತಿದ್ದೇವೆ. ಇದರ ಬಗೆಗಿನ ಕಡತವನ್ನು ತರಿಸಿ ಹಿಂದಿನ ಕೈಗಾರಿಕಾ ಸಚಿವರು, ಹೆಚ್ಚಿನ ಹಣ ಕೊಡುವುದು ಅವಶ್ಯಕತೆ ಇಲ್ಲ ಎಂದು ಹೇಳಿದ್ದಾರೆ. ಹಿಂದೆ ಯಾವ ರೇಟ್ ಅನ್ನು ಫಿಕ್ಸ್ ಮಾಡಲಾಗಿತ್ತು ಅದನ್ನು ಕೂಡಲೇ ಕೊಟ್ಟು, ಕಟ್ಟಡಕ್ಕೆ ಪಿ ಡಬ್ಲ್ಯೂಡಿಯಿಂದ ಅಪ್ರೂವಲ್ ತೆಗೆದುಕೊಂಡು, ಅದರ ಬಗ್ಗೆ ಮುಂದೆ ಏನೇನು ಕ್ರಮಗಳನ್ನು ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಿಳಿಸಲು ನಾನು ಇಷ್ಟಪಡುತ್ತೇನೆ.

ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಬೋಧನಾ ಸಿಬ್ಬಂದಿ ಕೊರತೆ

176 (795): ಶ್ರೀ ಅಭಯಚಂದ್ರ ಕೆ. (ಮೂಡಬಿದ್ರೆ) ಮಾನ್ಯ ಸಮಾಜ ಕಲ್ಯಾಣ ಸಚಿವರುಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೂಡಬಿದ್ರೆ ಹೆಣ್ಣುಮಕ್ಕಳ ಮೊರಾರ್ಜಿ ದೇಸಾಯಿ ಶಾಲಾ ಕಟ್ಟಡ ಮತ್ತು ವಸತಿ ಶಾಲೆಯ ಕಟ್ಟಡ ಪೂರ್ತಿಯಾಗಿದ್ದು, ಸರಿಯಾದ ಆವರಣ ಗೋಡೆ ಮತ್ತು ಬೋಧನಾ ಸಿಬ್ಬಂದಿ ಇಲ್ಲದೇ ವಿದ್ಯಾರ್ಥಿಗಳ ವ್ಯಾಸಂಗಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈ ಕೊರತೆ ನೀಗಿಸಲು ಸರ್ಕಾರ ತೆಗೆದುಕೊಂಡ ಕ್ರಮವೇನು ?

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ (ಸಮಾಜ ಕಲ್ಯಾಣ ಸಚಿವರು) :

ಅ) ಮೂಡುಬಿದ್ರೆ ತಾಲ್ಲೂಕು ಕಲ್ಲುಬೆಟ್ಟ ಗ್ರಾಮದಲ್ಲಿ ನಿರ್ಮಿಸಲಾದ ವಸತಿ ಶಾಲಾ ಸಂಕೀರ್ಣಕ್ಕೆ ತಂತಿಬೇಲಿ ನಿರ್ಮಾಣ ಮಾಡಲಾಗಿದೆ. ಪ್ರಸ್ತುತ ಈ ವಸತಿ ಶಾಲೆಯಲ್ಲಿ ಗಣಿತ ಸಂಗೀತ ಮತ್ತು ವೃತ್ತಿ ಶಿಕ್ಷಕರ ಹುದ್ದೆಗಳು ಮಾತ್ರ ಖಾಲಿ ಇರುತ್ತದೆ. ಬಾಕಿ ಎಲ್ಲಾ ಶಿಕ್ಷಕರ ಹುದ್ದೆಗಳು ಭರ್ತಿಯಾಗಿವೆ.

ಆ) ಹೆಣ್ಣುಮಕ್ಕಳ ಹಿತದೃಷ್ಟಿಯಿಂದ ಅವರ ವಸತಿ ಗೃಹಗಳ ಸುತ್ತಲೂ ಆವರಣ ಗೋಡೆ ನಿರ್ಮಾಣ ಮಾಡಲು ದಿನಾಂಕ : 18-5-2006 ರಂದು ಕಾರ್ಯಾದೇಶ ನೀಡಲಾಗಿದೆ.

2005-06ನೇ ಸಾಲಿನಿಂದ ಎಲ್ಲಾ ನವೋದಯ/ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ನಿರ್ವಹಣೆಯನ್ನು ಅನುದಾನ ಸಹಿತ ಜಿಲ್ಲಾ ಪಂಚಾಯತ್‌ಗಳ ವಶಕ್ಕೆ ವರ್ಗಾವಣೆ ಮಾಡಲಾಗಿದೆ. ಖಾಲಿ ಇರುವ ಶಿಕ್ಷಕರ ಹುದ್ದೆಗಳನ್ನು ಹೊರ ಸಂಪನ್ಮೂಲದಿಂದ ತಾತ್ಕಾಲಿಕವಾಗಿ ತುಂಬಿಕೊಳ್ಳಲು ಎಲ್ಲಾ ಜಿಲ್ಲಾ ಪಂಚಾಯತಿಗಳಿಗೆ ಈಗಾಗಲೇ ಸೂಚನೆ ನೀಡಲಾಗಿದೆ.

ಶ್ರೀ ಕೆ. ಅಭಯಚಂದ್ರ : ಉತ್ತರವನ್ನು ಒದಗಿಸಿದ್ದಾರೆ. ಹೆಣ್ಣು ಮಕ್ಕಳೇ ಇರುವಂಥ ಮೂಡಬಿದ್ರೆಯ ಮೊರಾರ್ಜಿ ದೇಸಾಯಿ ಶಾಲೆಗೆ ಆವರಣ ಗೋಡೆ ಇಲ್ಲ. ಆವರಣ ಗೋಡೆ ಇಲ್ಲದಿರುವುದರಿಂದ , ಹೆಣ್ಣುಮಕ್ಕಳು ಹೊರಗೆ ತಿರುಗಾಡುವಾಗ ತೊಂದರೆಯಾಗುವುದರಿಂದ ಅದಕ್ಕೆ ಸರಿಯಾದಂಥ ಆವರಣಗೋಡೆ ಬೇಕು ಎಂದು ನಾನು ಕೇಳಿದ್ದ. ಅದನ್ನು ಆದಷ್ಟು ಬೇಗ ಮಾಡಬೇಕು. ಅದೇ ರೀತಿ, ಅಲ್ಲಿ ಬೋಧಕರು ಸರಿಯಾಗಿ ಇಲ್ಲ. ಬೋಧಕರನ್ನು ಕೂಡಲೇ ಒದಗಿಸಬೇಕೆಂದು ನಾನು ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಾಲದಂದ್ರ ಲ. ಜಾರಕಿಹೊಳಿ : ಮೂಡಬಿದ್ರೆಯ ಮೊರಾರ್ಜಿ ದೇಸಾಯಿ ಸ್ಕೂಲಿಗೆ ಕಾಂಪೌಂಡ್ ವಾಲ್ ಇಲ್ಲ ಎಂದು ಮಾನ್ಯ ಸದಸ್ಯರು ಹೇಳಿದ್ದು. ಅದನ್ನು ಮೂರು ತಿಂಗಳೊಳಗಾಗಿ ಕಟ್ಟಿಸಿಕೊಡುತ್ತೇವೆಂದು ಮಾನ್ಯ ಸದಸ್ಯರಿಗೆ ಭರವಸೆ ಕೊಡುತ್ತೇನೆ. ಹಾಗೆಯೇ, ಕೆಲವೊಂದು ಶಿಕ್ಷಕರ ಕೊರತೆ ಇದೆ ಎಂದು ಹೇಳಿದ್ದಾರೆ. ಮೊರಾರ್ಜಿ ದೇಸಾಯಿ ಶಾಲೆಗಳ ಶಿಕ್ಷಕರ ನೇಮಕ ಮಾಡುವಂಥ ಅಧಿಕಾರ, ಜಿಲ್ಲಾ ಪಂಚಾಯತಿಯ ಸಿ ಇ ಒ ಗೆ ಇರುವುದರಿಂದ, ಅದನ್ನೂ ಆದಷ್ಟು ಬೇಗನೆ ನೇಮಕಾತಿ ಮಾಡುತ್ತೇವೆಂದು ತಮ್ಮ ಮುಖಾಂತರ ಮಾನ್ಯ ಸದಸ್ಯರ ಗಮನಕ್ಕೆ ತರುತ್ತೇನೆ.

ಶ್ರೀ ಕೆ. ಅಭಯಚಂದ್ರ : ಈ ಮೊರಾರ್ಜಿ ದೇಸಾಯಿ ವಸತಿ ಶಾಲೆ ಪ್ರಾರಂಭವಾಗಿ 7–8 ವರ್ಷಗಳಾದವು. ಇನ್ನೂ ಕೂಡ ಅದಕ್ಕೆ ಸರಿಯಾದಂಥ ಶಿಕ್ಷಕರ ನೇಮಕಾತಿಯಾಗದಿದ್ದರೆ. ಅಲ್ಲಿನ ವಿದ್ಯಾರ್ಥಿಗಳ ಗತಿಯೇನು ? ಆದ್ದರಿಂದ, ಶೀಘ್ರಗತಿಯಲ್ಲಿ ಅದನ್ನು ಮಾಡಬೇಕು. ಇಲ್ಲದಿದ್ದರೆ, ಆ ವಸತಿ ಶಾಲೆಯ ಉಪಯೋಗವೇ ಆಗುವುದಿಲ್ಲ. ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ, ವಸತಿ ಶಾಲೆಯನ್ನು ಪ್ರಾರಂಭ ಮಾಡಿ ಅಲ್ಲಿಗೆ ಸರಿಯಾದಂಥ ಶಿಕ್ಷಕರನ್ನು ಮತ್ತು ವಾರ್ಡನ್‌ರವರನ್ನು ಕೊಡದಿದ್ದರೆ ಆ ಶಾಲೆ ಹಾಳಾಗುತ್ತದೆ. ಅದನ್ನು ಜರೂರಾಗಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

ಶ್ರೀ ಎ. ಕೃಷ್ಣಪ್ಪ : ಈ ಹಿಂದೆ ಮೊರಾರ್ಜಿ ದೇಸಾಯಿ ಶಾಲೆಗಳಿಗೆ ಉಪಾಧ್ಯಾಯರನ್ನು ನೇಮಕ ಮಾಡುವಾಗ, ಇಲಾಖೆ ಒಂದು ಸಂಸ್ಥೆಯನ್ನು ಸ್ಥಾಪನೆ ಮಾಡಿ, ಅದರ ಮೂಲಕ ಅಪಾಯಿಂಟ್ ಮಾಡುತ್ತಿದ್ದೆವು. ಈ ರೀತಿಯ ಒತ್ತಡಗಳು ಬಂದಾಗ, ಟೆಂಪೊರರಿ ಆರೇಂಜ್‌ಮೆಂಟ್ಸ್ ಮಾಡಿ, ನಾವೇ ಟೀಚರ್ಸ್‌ನ್ನು ಅಪಾಯಿಂಟ್ ಮಾಡುವಂಥ ಒಂದು ಪದ್ಧತಿಯನ್ನು ಇಲಾಖೆಯಲ್ಲಿ ಇಟ್ಟುಕೊಂಡಿದ್ದೆವು. ಈಗ ಅದನ್ನು ಜಿಲ್ಲಾ ಪಂಚಾಯತಿಗೆ ಕೊಟ್ಟಿದ್ದೀರಿ. ರಾಜ್ಯದಲ್ಲಿನ ಸುಮಾರು ಮೊರಾರ್ಜಿ ದೇಸಾಯಿ ಶಾಲೆಗಳಲ್ಲಿ ಟೀಚರ್ಸ್ ಇಲ್ಲ ಎಂದು ಹೇಳುತ್ತಿದ್ದಾರೆ. ಉಪಾಧ್ಯಾಯರ ನೇಮಕದ ವಿಚಾರದಲ್ಲಿ ಹಿಂದೆ ಇದ್ದಂಥ ಪದ್ಧತಿಯನ್ನು ಬದಲಾವಣೆ ಮಾಡಿದ್ದು ಏಕೆ? ಯಾವತ್ತೂ ಕೂಡ ಬದಲಾವಣೆಗಳನ್ನು ತರುವಂಥಾದ್ದು ಫರ್ದರ್ ಇಂಪ್ರೂವ್‌ಮೆಂಟ್ ಫರ್ದರ್ ಅಸಿಸ್ಟೆನ್ಸ್ ಹೆಚ್ಚಾಗಬೇಕು. ಮೋಸ್ಟ್ ಪ್ರೋಗ್ರೇಸೀವ್ ಆಗಬೇಕು ಎನ್ನುವ ಉದ್ದೇಶದಿಂದ ಬದಲಾವಣೆಗಳನ್ನು ಮಾಡುವುದು. ಇರುವಂಥ ಸೌಕರ್ಯಗಳನ್ನು ಸಮರ್ಪಕವಾಗಿ ಉಪಯೋಗಿಸಿಕೊಳ್ಳದೇ, ಅದನ್ನು ಜಿಲ್ಲಾ ಪಂಚಾಯತಿಗೆ ಕೊಟ್ಟಿದ್ದು ಏಕೆ? ಹಿಂದೆ ನಾವು ಮಾಡಿದ್ದಂಥ ಎಜ್ಯುಕೇಷನಲ್ ಸಂಸ್ಥೆಗಳಿಗೆ ಪವರ್ಸ್ ಕೊಟ್ಟು, ಅವರೇ

ಉಪಾಧ್ಯಾಯರನ್ನು ರೆಕ್ರೂಟ್ ಮಾಡಿ ಆ ಶಾಲೆಗಳನ್ನು ನಡೆಸುವುದು, ಆ ಮಕ್ಕಳಿಗೆ ಬೇಕಾದಂಥ ಸಬ್ಜೆಕ್ಟೆವೈಸ್ ಟೀಚರ್ಸ್ ಅನ್ನು ತೆಗೆದುಕೊಂಡು ನಡೆಸುತ್ತಿದ್ದರು. ಅಂಥ ಅಧಿಕಾರವನ್ನು ನಾವೇ ಇಟ್ಟುಕೊಂಡಿದ್ದೆವು. ಆ ಸಂಸ್ಥೆಯ ಮೇಲ್ವಿಚಾರಣೆಗೆ ನಾವು ಒಬ್ಬ ಎಕ್ಸಿಕ್ಯೂಟಿವ್ ಆಫೀಸರನ್ನೂ ಕೂಡ ಇಟ್ಟಿದ್ದೆವು. ಅವರನ್ನು ತೆಗೆದದ್ದು ಏಕೆ? ಪದ್ಧತಿಯನ್ನು ಬದಲಾವಣೆ ಮಾಡಿ, ಅಲ್ಲಿನ ಮಕ್ಕಳಿಗೆ ತಾಪತ್ರಯ ಮಾಡುತ್ತಿರುವುದು ಏಕೆ? ಮಕ್ಕಳಿಗೆ ಮಾಡಬೇಕಾದ ಲೈಸೆನ್ಸ್ ಅನ್ನು ಪೋಸ್ಟ್‌ಪೋನ್ ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ದಯಮಾಡಿ ಹಿಂದಿನ ಪದ್ಧತಿಯನ್ನು ವಾಪಸ್ಸು ತರುವುದೇ ಲೇಸು. ಅವರಿಗೇ ಅಧಿಕಾರ ಕೊಡಿ. ಅವರು ಟೆಂಪೊರರಿ ಅರೇಂಜ್‌ಮೆಂಟ್ಸ್ ಅನ್ನಾದರೂ ಮಾಡಿ ಪಾಠ ಮಾಡಲಿ. ನಂತರ ಟೋಟಲ್ ರೆಕ್ರೂಟ್‌ಮೆಂಟ್ ಮಾಡಿದಾಗ, ಆ ಟೀಚರ್ಸ್ ಅನ್ನೂ ರೆಕ್ರೂಟ್ ಮಾಡಿ ಪೋಸ್ಟಿಂಗ್ಸ್ ಅನ್ನು ಕೊಡಬಹುದು. ಈಗ ಹಿಂದಿನ ಪದ್ಧತಿಯನ್ನು ವಾಪಸ್ಸು ತರುವುದು ಉಚಿತವೆಂದು ಹೇಳುತ್ತಿದ್ದೇನೆ.

ಶ್ರೀ ಆರ್. ಧ್ರುವನಾರಾಯಣ : ಪ್ರತಿ ಜಿಲ್ಲೆಯಲ್ಲಿ ನಡೆಯುತ್ತಿರುವ ಕೇಂದ್ರ ಸರ್ಕಾರದ ನವೋದಯ ಶಾಲೆಗಳ ಮಾದರಿಯಲ್ಲಿ ರಾಜ್ಯದಲ್ಲೂ ಆಗಬೇಕು ಎನ್ನುವ ಉದ್ದೇಶದಿಂದ ರಾಜ್ಯ ಸರ್ಕಾರ ಈ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಮಾಡಿತು. ಮೊರಾರ್ಜಿ ದೇಸಾಯಿ ವಸತಿ ಶಾಲೆಗೇ ಒಬ್ಬರು ಡೈರೆಕ್ಟರ್ ಇದ್ದಾರೆ, ಸಿಬ್ಬಂದಿ ವರ್ಗ ಇದೆ. ಈ ಒಂದು ಇಲಾಖೆಯ ಮುಖಾಂತರ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ನಡೆಯಬೇಕು. ಹಾಗಾದಾಗ ಮಾತ್ರ ಈ ಯೋಜನೆ ಸಫಲವಾಗುತ್ತದೆ. ಈಗ ವಸತಿ ಶಾಲೆಗಳ ನಿರ್ವಹಣೆಯನ್ನು ಜಿಲ್ಲಾ ಪಂಚಾಯತಿಗಳಿಗೆ ವರ್ಗಾವಣೆ ಮಾಡಿದ್ದಾರೆ. ಇವುಗಳನ್ನು ಜಿಲ್ಲಾ ಪಂಚಾಯತಿಗಳು ನಿರ್ವಹಣೆ ಮಾಡಿದರೆ ಹೇಗಾಗುತ್ತದೆಂದರೆ, ಬೇರೆ ಹಾಸ್ಟೆಲ್‌ಗಳು, ವಸತಿ ಶಾಲೆಗಳು ಹೇಗಿವೆಯೋ, ಅದೇ ರೂಪದಲ್ಲಿ ಇವುಗಳೂ ನಡೆಯುತ್ತವೆ. ಹಾಗಾದಾಗ, ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಕಾನ್ಸೆಪ್ಟ್ ಏನಿದೆ, ಆ ಕಾನ್ಸೆಪ್ಟ್ ನಿಜವಾಗಲೂ ವ್ಯರ್ಥವಾಗುತ್ತದೆ. ರಾಜ್ಯಮಟ್ಟದಲ್ಲಿ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಿಗೆ ಡೈರೆಕ್ಟರ್ ಇದ್ದಾರೆ. ಈ ಶಾಲೆಗಳಿಗೆ ರಾಜ್ಯಮಟ್ಟದಿಂದ ನಿರ್ದೇಶನ ಕೊಡತಕ್ಕಂಥಾದ್ದು, ಆಯ್ಕೆ ಮಾಡತಕ್ಕಂಥಾದ್ದು ಎಲ್ಲವನ್ನೂ ಮಾಡಬೇಕು. ಜಿಲ್ಲಾ ಪಂಚಾಯತಿ ವ್ಯಾಪ್ತಿಗೆ ಬರತಕ್ಕಂಥ ಬಹಳಷ್ಟು ಹಾಸ್ಟೆಲ್‌ಗಳಿವೆ. ತಾಲ್ಲೂಕು ಮಟ್ಟದ ಹಾಸ್ಟೆಲ್‌ಗಳು, ಜಿಲ್ಲಾ ಮಟ್ಟದ ಹಾಸ್ಟೆಲ್‌ಗಳು ಜಿಲ್ಲಾ ಪಂಚಾಯತಿಗೆ ಬರುತ್ತವೆ. ಮೊರಾರ್ಜಿ ದೇಸಾಯಿ ವಸತಿ ಶಾಲೆಯನ್ನೂ ಅವರು ನಿರ್ವಹಣೆ ಮಾಡಿದರೆ, ಅವುಗಳು ಮಾಮೂಲಿ ಹಾಸ್ಟೆಲ್‌ಗಳ ತರಹ ಆಗುತ್ತವೆ. ಆದ್ದರಿಂದ, ಕೇಂದ್ರ ಸರ್ಕಾರದ ನವೋದಯ ಶಾಲೆಗಳ ಕಾನ್ಸೆಪ್ಟ್ ಮಾದರಿಯಲ್ಲಿ ಮೊರಾರ್ಜಿ ವಸತಿ ಶಾಲೆಗಳೂ ಆಗಬೇಕು ಎನ್ನತಕ್ಕಂಥಾದ್ದನ್ನು ಅಧ್ಯಕ್ಷರ ಮೂಲಕ ತಮ್ಮಲ್ಲಿ ಮನವಿ ಮಾಡಿಕೊಳ್ಳುತ್ತಿದ್ದೇನೆ.

ಡಾ : ಶರಣಪ್ರಕಾಶ್ ರುದ್ರಪ್ಪ ಪಾಟೀಲ್ : ನಮ್ಮ ಸೇಡಂ ತಾಲ್ಲೂಕಿನ ಮಳಖೇಡ್‌ನಲ್ಲೂ ಕೂಡ ಒಂದು ನವೋದಯ ಶಾಲೆಯಿದೆ. ಅದನ್ನು ಕಟ್ಟಿ ಎರಡು ವರ್ಷವಾಯಿತು. ಒಳ್ಳೆಯ ರೀತಿಯಿಂದ ಅದನ್ನು ಕಟ್ಟಿದ್ದಾರೆ. ಆದರೆ ಅದಕ್ಕೆ ಕಾಂಪೌಂಡ್ ವಾಲ್ ಇಲ್ಲ. ಮಾನ್ಯ ಸದಸ್ಯರು

ಕೇಳಿದಂಥ ಪ್ರಶ್ನೆಗೆ ಮೂರು ತಿಂಗಳಲ್ಲೇ ಕಾಂಪೌಂಡ್ ವಾಲ್ ಕಟ್ಟಿಸಿಕೊಡುತ್ತೇವೆ ಎಂದು ಮಾನ್ಯ ಸಚಿವರು ಉತ್ತರ ಹೇಳಿದುದ್ದನ್ನು ಕೇಳಿ ಬಹಳ ಖುಷಿಯಾಯಿತು. ಅದೇ ರೀತಿಯಲ್ಲಿ, ನಮ್ಮ ಮಳಖೇಡ್ ನವೋದಯ ಶಾಲೆಗೆ ಕೂಡ ಕಾಂಪೌಂಡ್ ವಾಲ್ ಮಾಡಿಸಿಕೊಡಬೇಕು ಎನ್ನುವುದು ನನ್ನ ಮನವಿ.

ಶ್ರೀ ಬಾಲಚಂದ್ರ ಲ. ಜಾರಕಿಹೊಳಿ : ಹಿರಿಯ ಸದಸ್ಯರಾದಂಥ ಕೃಷ್ಣಪ್ಪನವರು ಒಂದು ಸಲಹೆಯನ್ನು ಕೊಟ್ಟಿದ್ದಾರೆ. ಮೊರಾರ್ಜಿ ದೇಸಾಯಿ ಶಾಲೆಗಳ ನಿರ್ವಹಣೆಯನ್ನು ಜಿಲ್ಲಾ ಪಂಚಾಯತಿಗಳಿಗೆ ವರ್ಗಾವಣೆ ಮಾಡದೇ, ಇಲಾಖೆಯಿಂದ ನೇಮಕಗೊಂಡ ಒಂದು ಸಂಸ್ಥೆ ಇದ್ದು, ಅದರ ಮುಖಾಂತರ ನಡೆಸಬೇಕು ಎಂದು ಸಲಹೆ ಕೊಟ್ಟಿದ್ದಾರೆ. ತಾವು ಒಳ್ಳೆಯ ಸಲಹೆಯನ್ನು ಕೊಟ್ಟಿದ್ದೀರಿ. ಸರ್ಕಾರ ಇದನ್ನು ಗಮನದಲ್ಲಿಟ್ಟು ಕೊಂಡು, ಇದರ ಬಗ್ಗೆ ಪರಿಶೀಲನೆ ಮಾಡುತ್ತದೆ. ಮತ್ತೊಬ್ಬ ಸದಸ್ಯರು ತಮ್ಮ ಕ್ಷೇತ್ರದಲ್ಲಿರುವ ಶಾಲೆಗೆ ಕಾಂಪೌಂಡ್ ವಾಲ್ ಇಲ್ಲ, ಅದನ್ನು ಕಟ್ಟಿಸಿಕೊಡಿ ಎಂದು ಕೇಳಿದರು. ಆದಷ್ಟು ಶೀಘ್ರದಲ್ಲಿ ಅದನ್ನು ಕಟ್ಟಿಸಿಕೊಡುತ್ತೇವೆ ಎಂದು ಮಾನ್ಯ ಸದಸ್ಯರಿಗೆ ತಮ್ಮ ಮುಖಾಂತರ ಭರವಸೆಯನ್ನು ಕೊಡುತ್ತೇವೆ.

ಹಿರೇಕೆರೂರು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರವನ್ನು ಮೇಲ್ದರ್ಜೆಗೇರಿಸುವುದು.

177 (900): ಶ್ರೀ ಪಾಟೀಲ್ ಬಿ.ಸಿ. (ಹಿರೇಕೆರೂರು) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಿರೇಕೆರೂರು ತಾಲ್ಲೂಕಿನ ಸಮುದಾಯ ಆರೋಗ್ಯ ಕೇಂದ್ರವನ್ನು 100 ಹಾಸಿಗೆ ಮೇಲ್ದರ್ಜೆಗೇರಿಸಿದ್ದು, ಇದು ಕಾರ್ಯಗತವಾಗಿದೆಯೇ ?

ಆ) ಈ ಆಸ್ಪತ್ರೆಗೆ ಮೊದಲು ಹೊಂದಿದ್ದ ವೈದ್ಯರು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಇ) 100 ಹಾಸಿಗೆ ಮೇಲ್ದರ್ಜೆಗೇರಿಸಿದ ನಂತರ ಈ ಆಸ್ಪತ್ರೆ ಹೊಂದಿದ ವೈದ್ಯರು ಹಾಗೂ ಸಿಬ್ಬಂದಿಗಳ ಸಂಖ್ಯೆ ಎಷ್ಟು ?

ಈ) ಇಲ್ಲಿಯವರೆಗೆ ಎಷ್ಟು ವೈದ್ಯರುಗಳು ಹಾಗೂ ಸಿಬ್ಬಂದಿಗಳನ್ನು ನೇಮಿಸಲಾಗಿದೆ ?

ಶ್ರೀ ಆರ್. ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :

ಅ) ಹೌದು.

ಆ) ಈ ಆಸ್ಪತ್ರೆಗೆ ಮೊದಲು ಹೊಂದಿದ್ದ ವೈದ್ಯರು ಹಾಗೂ ಇತರೆ ಸಿಬ್ಬಂದಿ ವಿವರ ಈ ಕೆಳಕಂಡಂತಿದೆ.

ವೈದ್ಯಾಧಿಕಾರಿಗಳು	06
ದಂತ ವೈದ್ಯರು	01
ಶುಶ್ರೂಷಕಿಯರು	07
ಎಎನ್ಎಂ	01